# ಕೃಷಿ ವಿಶ್ವವಿದ್ಯಾಲಯ, ಧಾರವಾಡ

**ಕೃಷಿನಗರ, ಧಾರವಾಡ-580005, ಕರ್ನಾಟಕ**

**ಕುಲಸಚಿವರ ಕಛೇರಿ**

ದೂರವಾಣಿ (ಕಛೇರಿ): 0836-2214203; ಮಿಂಚಂಚೆ: registrar@uasd.in


ಸಂ: ಕುಸ/ಮು.ಪ್ರ.ಅ./2023-24 ದಿನಾಂಕ : 03-01-2024.

## ಅಧಿಸೂಚನೆ

ವಿಷಯ : **ರಾಜ್ಯದ ವಿವಿಧ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯಗಳಲ್ಲಿ ವಿವಿಧ ಸ್ನಾತಕ ಪದವಿಗಳಿಗೆ ಕೆ.ಸಿ.ಇ.ಟಿ [KCET-2023] ಮತ್ತು ಸಿ.ಯು.ಇ.ಟಿ.(ಐ.ಸಿ.ಎ.ಆರ್-ಯುಜಿ)-2023 [CUET(ICAR-UG)-2023] ಕೋಟಾಗಳಡಿ ಭರ್ತಿಯಾಗದೇ ಉಳಿದಿರುವ ಸೀಟುಗಳಿಗೆ ದಿನಾಂಕ: 11/01/2024 ಮತ್ತು 12/01/2024 ರಂದು ಮುಕ್ತ ಕೌನ್ಸಿಲಿಂಗ್ ಪ್ರಕ್ರಿಯೆ ನಡೆಸುವ ಕುರಿತು.**

ಉಲ್ಲೇಖ :
1. F.No.Agril.Edn./1(9)/2012-Exam Cell Part(I), dated 19th December 2023.
2. ರಾಜ್ಯದ ಎಲ್ಲಾ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯಗಳ ಸ್ನಾತಕ ಪದವಿಗಳ ಸಮಿತಿ ಸಭೆಯ ನಡಾವಳಿಗಳು ದಿನಾಂಕ: 03/01/2024.
3. ಕುಲಪತಿಗಳು, ಕೃವಿವಿ, ಧಾರವಾಡ ರವರ ಅನುಮೋದನೆ ದಿನಾಂಕ: 03-01-2024.

*****

ಶೈಕ್ಷಣಿಕ ವರ್ಷ 2023-24ನೇ ಸಾಲಿನಲ್ಲಿ ಸ್ನಾತಕ ಪದವಿಗಳಿಗೆ ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು, ಕೃಷಿ ವಿಶ್ವವಿದ್ಯಾಲಯ, ಧಾರವಾಡ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ - ವಿಶ್ವವಿದ್ಯಾಲಯಗಳಲ್ಲಿ ವಿವಿಧ ಸ್ನಾತಕ ಪದವಿಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (KEA) ಕೆ.ಸಿ.ಇ.ಟಿ. [KCET-2023] ಮತ್ತು ಐ.ಸಿ.ಎ.ಆರ್.ನ (ICAR) ಸಿ.ಯು.ಇ.ಟಿ. (ಐ.ಸಿ.ಎ.ಆರ್-ಯುಜಿ)-2023 [CUET(ICAR-UG)-2023] ಅಡಿಯಲ್ಲಿ ನಡೆಸಿದ ಪ್ರವೇಶ ಪ್ರಕ್ರಿಯೆಯಲ್ಲಿ ಭರ್ತಿಯಾಗದೆ ಉಳಿದಿರುವ ಪ್ರವರ್ಗವಾರು ಸೀಟುಗಳನ್ನು ಮುಕ್ತ ಕೌನ್ಸಲಿಂಗ್ ಆಯ್ಕೆ ಪ್ರಕ್ರಿಯೆ ಮೂಲಕ ಈ ಕೆಳಗಿನ ವೇಳಾಪಟ್ಟಿಯಂತೆ ಭರ್ತಿ ಮಾಡಲಾಗುವುದು.

| ಪ್ರಕ್ರಿಯೆ | ದಿನಾಂಕ ಮತ್ತು ಸಮಯ | ಸ್ಥಳ |
|---|---|---|
| ಆನ್‌ಲೈನ್ (Online) ಮುಖಾಂತರ ಅರ್ಜಿ ಸಲ್ಲಿಕೆ | 08/01/2024 ರಿಂದ 10/01/2024 ಸಂಜೆ 05.00 ಗಂಟೆ ವರೆಗೆ | ವಿಶ್ವವಿದ್ಯಾಲಯದ ಜಾಲತಾಣಗಳು www.uasd.edu, www.uasbangalore.edu.in, www.uasraichur.edu.in, www.uhsbagalkot.edu.in |
| ಅರ್ಜಿದಾರರ ಮೆರಿಟ್ ಪಟ್ಟಿ ಪ್ರಕಟಣೆ | 10/01/2024 ಸಂಜೆ 5.00 ಗಂಟೆ ನಂತರ | ವಿಶ್ವವಿದ್ಯಾಲಯದ ಜಾಲತಾಣಗಳು www.uasd.edu, www.uasbangalore.edu.in, www.uasraichur.edu.in, www.uhsbagalkot.edu.in |
| KCET-2023 ಮುಕ್ತ ಕೌನ್ಸಲಿಂಗ್ ಮತ್ತು ಪ್ರವೇಶಾತಿ | 11/01/2024 ಬೆಳಿಗ್ಗೆ 10.00 ಗಂಟೆಗೆ | ರೈತರ ಜ್ಞಾನಾಭಿವೃದ್ಧಿ ಕೇಂದ್ರ, ಕೃಷಿ ವಿಶ್ವವಿದ್ಯಾಲಯ, ಎತ್ತಿನಗುಡ್ಡ ಆವರಣ, ಧಾರವಾಡ-580005. |
| CUET(ICAR-UG)-2023 ಮುಕ್ತ ಕೌನ್ಸಲಿಂಗ್ ಮತ್ತು ಪ್ರವೇಶಾತಿ | 12/01/2024 ಬೆಳಿಗ್ಗೆ 10.00 ಗಂಟೆಗೆ | ರೈತರ ಜ್ಞಾನಾಭಿವೃದ್ಧಿ ಕೇಂದ್ರ, ಕೃಷಿ ವಿಶ್ವವಿದ್ಯಾಲಯ, ಎತ್ತಿನಗುಡ್ಡ ಆವರಣ, ಧಾರವಾಡ-580005. |

**ಆನ್‌ಲೈನ್ ಅರ್ಜಿ ಶುಲ್ಕ:** **(1) ಪ.ಜಾ./ಪ.ಪಂ./ಪ್ರವರ್ಗ-1 ಅಭ್ಯರ್ಥಿಗಳಿಗೆ: ರೂ.500/-**
**(2) ಇತರೆ ಅಭ್ಯರ್ಥಿಗಳಿಗೆ: ರೂ.1000/-**

ಈ ಮುಕ್ತ ಕೌನ್ಸಲಿಂಗ್‌ನಲ್ಲಿ ಪ್ರವೇಶ ಬಯಸುವ ಅಭ್ಯರ್ಥಿಗಳು ವಿಶ್ವವಿದ್ಯಾಲಯ ನಿಗದಿಪಡಿಸಿದ ಶುಲ್ಕದೊಂದಿಗೆ ಅರ್ಜಿಯನ್ನು ಆನ್‌ಲೈನ್ (Online) ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು ಹಾಗೂ ಅರ್ಜಿ ಸಲ್ಲಿಸುವಾಗ ಅರ್ಜಿಯ ಶುಲ್ಕವನ್ನು ಆನ್‌ಲೈನ್ ಮುಖಾಂತರ ಮಾತ್ರ ಪಾವತಿಸಬೇಕು. ಅಂಚೆ ಅಥವಾ ಇತರೆ ಮೂಲಗಳಿಂದ ಸಲ್ಲಿಸಿದ ಅರ್ಜಿಗಳನ್ನು ಯಾವುದೇ ಕಾರಣಕ್ಕೆ ಪರಿಗಣಿಸುವುದಿಲ್ಲ.

**ಎಲ್ಲಾ ಕೃಷಿ ಹಾಗೂ ತೋಟಗಾರಿಕೆ ವಿಶ್ವವಿದ್ಯಾನಿಲಯಗಳಲ್ಲಿ ಲಭ್ಯವಿರುವ ಸೀಟುಗಳಿಗೆ ಮುಕ್ತ ಕೌನ್ಸಲಿಂಗ್ ಆಯ್ಕೆ ಪ್ರಕ್ರಿಯೆಯನ್ನು ಒಂದೇ ಸ್ಥಳದಲ್ಲಿ, ಅಂದರೆ, ಕೃಷಿ ವಿಶ್ವವಿದ್ಯಾಲಯ, ಧಾರವಾಡದಲ್ಲಿ ನಡೆಸಲಾಗುವುದು.**

ಕರ್ನಾಟಕ ರಾಜ್ಯದ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳ ಸ್ನಾತಕ ಪದವಿಗಳಿಗೆ ನಡೆಸಿದ KCET-2023 ಮತ್ತು CUET (ICAR-UG)-2023 ಪರೀಕ್ಷೆಗಳನ್ನು ಬರೆದು ರ್‍ಯಾಂಕ್ ಪಡೆದ ಅಭ್ಯರ್ಥಿಗಳು ಮುಕ್ತ ಕೌನ್ಸಲಿಂಗ್‌ಗೆ ಅರ್ಜಿ ಸಲ್ಲಿಸಲು, ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು, ಅರ್ಹರಾಗಿರುತ್ತಾರೆ.

1. KCET-2023 ಮತ್ತು CUET (ICAR-UG)-2023 ಪರೀಕ್ಷೆ ಬರೆದು ರ್‍ಯಾಂಕ ಗಳಿಸಿದ ಕರ್ನಾಟಕ ರಾಜ್ಯದ ಅಭ್ಯರ್ಥಿಗಳಿಗೆ ಮಾತ್ರ ಮುಕ್ತ ಕೌನ್ಸಲಿಂಗ್‌ನಲ್ಲಿ ಭಾಗವಹಿಸಲು ಅವಕಾಶವಿರುತ್ತದೆ.
2. ICAR ಕೋಟಾದಡಿಯಲ್ಲಿ ಭಾಗವಹಿಸುವ ಅಭ್ಯರ್ಥಿಗಳು ಕಡ್ಡಾಯವಾಗಿ ICAR ನಡೆಸಿದ CUET (ICAR-UG)-2023 ಪರೀಕ್ಷೆ ಬರೆದಿದ್ದು, ICAR ನೀಡಿದ ರ್‍ಯಾಂಕ ಪಟ್ಟಿಯ ಪ್ರತಿಯನ್ನು ಕಡ್ಡಾಯವಾಗಿ ಪಡೆದಿರಬೇಕು.
3. KCET-2023 ಕೋಟಾದಡಿಯಲ್ಲಿ ಭಾಗವಹಿಸುವ ಅಭ್ಯರ್ಥಿಗಳು ಕಡ್ಡಾಯವಾಗಿ KCET-2023 ಪರೀಕ್ಷೆ ಬರೆದಿದ್ದು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA) ನೀಡಿದ ರ್‍ಯಾಂಕ ಪ್ರತಿ ಹಾಗೂ ದಾಖಲಾತಿ ಪರಿಶೀಲನಾ ಸ್ವೀಕೃತಿಪತ್ರವನ್ನು (Document Verification Acknowledgement) ಪಡೆದಿರಬೇಕು.
4. KCET-2023 ಮತ್ತು CUET (ICAR-UG)-2023 ಕೋಟಾಗಳಡಿ ಮುಕ್ತ ಕೌನ್ಸಲಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಇಚ್ಛಿಸುವ ಅಭ್ಯರ್ಥಿಗಳು ಸ್ನಾತಕ ಪದವಿಗಳಿಗೆ ನಿಗದಿಪಡಿಸಲಾಗಿರುವ ಶೈಕ್ಷಣಿಕ ಅರ್ಹತೆ ಹಾಗೂ ಮೀಸಲಾತಿಗೆ ಪೂರಕವಾಗುವ ಪ್ರಮಾಣ ಪತ್ರಗಳನ್ನು ಪಡೆದಿರಬೇಕು.
5. ಸೀಟ್ ಮ್ಯಾಟ್ರಿಕ್ಸನಲ್ಲಿ ಪ್ರಕಟಿಸಿರುವ ಪ್ರವರ್ಗದಡಿಗಳಲ್ಲಿ ಅರ್ಹ ಆಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಅಂತಹ ಸೀಟುಗಳನ್ನು ನಿಯಮಾನುಸಾರ ಸಾಮಾನ್ಯ ವರ್ಗಕ್ಕೆ ಪರಿವರ್ತಿಸಲಾಗುವುದು.
6. ಮುಕ್ತ ಕೌನ್ಸಲಿಂಗ್ ಪ್ರಕ್ರಿಯೆಯಲ್ಲಿ ಅಭ್ಯರ್ಥಿಗಳು ಮಾಡಿಕೊಳ್ಳುವ ಪ್ರಥಮ ಸೀಟು ಆಯ್ಕೆಯೇ ಅಂತಿಮವಾಗಿರುತ್ತದೆ.
7. ಈ ಮುಕ್ತ ಕೌನ್ಸಲಿಂಗ್ ಪ್ರಕ್ರಿಯೆಯಲ್ಲಿ ICAR ಕೋಟಾದಡಿ ಪ್ರವೇಶ ಪಡೆದ ವಿದ್ಯಾರ್ಥಿಗಳು NTS Scholarship ಪಡೆಯಲು ಅರ್ಹರಾಗಿರುವುದಿಲ್ಲ.
8. **ಯಾವುದೇ ಅಭ್ಯರ್ಥಿಯು ದಿನಾಂಕ 11/01/2024 ರಂದು ನಡೆದ KCET-2023 ಮುಕ್ತ ಕೌನ್ಸಲಿಂಗ್ ಆಯ್ಕೆ ಪ್ರಕ್ರಿಯೆಯಲ್ಲಿ ಸೀಟು ಪಡೆದಿದ್ದರೆ, ಅಂತಹ ಅಭ್ಯರ್ಥಿಯು 12/01/2024 ರಂದು ನಡೆಯುವ CUET (ICAR-UG)-2023 ಕೌನ್ಸಲಿಂಗ್ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವಂತಿಲ್ಲ.**
9. **ಮುಕ್ತ ಕೌನ್ಸಲಿಂಗ್‌ನಲ್ಲಿ ಭಾಗವಹಿಸುವ ಅಭ್ಯರ್ಥಿಗಳು ನಿಗದಿತ ದಿನಾಂಕಗಳಂದು ಮುಂಜಾನೆ 09.30 ಘಂಟೆಗೆ ರೈತರ ಜ್ಞಾನಾಭಿವೃದ್ಧಿ ಕೇಂದ್ರ, ಕೃಷಿ ವಿಶ್ವವಿದ್ಯಾಲಯ, ಧಾರವಾಡದಲ್ಲಿ ಹಾಜರಿರಬೇಕು. ಯಾವದೇ ಕಾರಣಕ್ಕೂ ಮುಂಜಾನೆ 10.30 ಘಂಟೆಯ ನಂತರ ಬಂದ ಅಭ್ಯರ್ಥಿಗಳನ್ನು ಕೌನ್ಸಲಿಂಗ್ ಪ್ರಕ್ರಿಯೆಯಲ್ಲಿ ಭಾಗವಸಹಿಲು ನಿರಾಕರಿಸಲಾಗುವುದು.**
10. **ಈ ಅಧಿಸೂಚನೆಯ ದಿನಾಂಕದಂದು ಈಗಾಗಲೇ KCET-2023 ಮತ್ತು CUET(ICAR-UG)-2023 ಪ್ರವೇಶಾತಿ ಪ್ರಕ್ರಿಯೆಯಿಂದ ಆಯ್ಕೆಯಾಗಿ ರಾಜ್ಯದ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳಲ್ಲಿ ಯಾವುದೇ ಪದವಿಗಳಿಗೆ ಪ್ರವೇಶ ಪಡೆದಿರುವ ಅಭ್ಯರ್ಥಿಗಳು ಈ ಮುಕ್ತ ಕೌನ್ಸಲಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅರ್ಹತೆ ಹೊಂದಿರುವುದಿಲ್ಲ.**
11. **ಈ ಮುಕ್ತ ಕೌನ್ಸಲಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಎಲ್ಲಾ ಅಭ್ಯರ್ಥಿಗಳು ಕಡ್ಡಾಯವಾಗಿ KCET-2023 ಮತ್ತು CUET(ICAR-UG)-2023ನಲ್ಲಿ ಪರಿಶೀಲಿಸಿದ ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ತರಬೇಕಾಗುತ್ತದೆ. ಇಲ್ಲವಾದಲ್ಲಿ ಅಂತಹ ಅಭ್ಯರ್ಥಿಗಳು ಮುಕ್ತ ಕೌನ್ಸಲಿಂಗ್‌ನಲ್ಲಿ ಭಾಗವಹಿಸಲು ಅರ್ಹರಾಗಿರುವುದಿಲ್ಲ.**
12. ಈ ಮುಕ್ತ ಕೌನ್ಸಲಿಂಗ್‌ನಲ್ಲಿ ಭಾಗವಹಿಸುವ ಅಭ್ಯರ್ಥಿಗಳು ರಾಜ್ಯದ ಯಾವುದೇ ಕೃಷಿ ವಿಶ್ವವಿದ್ಯಾಲಯ/ತೋಟಗಾರಿಕೆ ವಿಶ್ವವಿದ್ಯಾಲಯ ಅಥವಾ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡೆದಿರುವುದಿಲ್ಲವೆಂದು **ರೂ.50/- ಗಳ ಮುದ್ರಾಂಕ ಕಾಗದದ ಮೇಲೆ ನಿಗದಿತ ನಮೂನೆಯಲ್ಲಿ ಮುಚ್ಚಳಿಕೆಯನ್ನು** ನೀಡಬೇಕು.

13. ಸದರಿ ಪ್ರಕ್ರಿಯೆಯಲ್ಲಿ ಆಯ್ಕೆಯಾಗುವ ಅಭ್ಯರ್ಥಿಗಳು ರೂ.32,725/- ಪ್ರವೇಶ ಶುಲ್ಕವನ್ನು ನಗದಾಗಿ ಸ್ಥಳದಲ್ಲಿಯೇ ಕಡ್ಡಾಯವಾಗಿ ಪಾವತಿಸಬೇಕಾಗಿರುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಪೋಷಕರ ವಾರ್ಷಿಕ ಆದಾಯ ರೂ.2.5 ಲಕ್ಷದೊಳಗಿದ್ದರೆ ಅಂತಹ ಅಭ್ಯರ್ಥಿಗಳು ಪ್ರವೇಶ ಶುಲ್ಕ ಪಾವತಿಸುವಂತಿಲ್ಲ; ವಾರ್ಷಿಕ ಆದಾಯ ರೂ.2.5 ಲಕ್ಷದಿಂದ ರೂ.10 ಲಕ್ಷದೊಳಗಿದ್ದರೆ ಅಂತಹ ಅಭ್ಯರ್ಥಿಗಳು ನಿಗದಿತ ಶುಲ್ಕದ ಶೇ.50 ರಷ್ಟು (ಅಂದರೆ ರೂ.16,362) ಮೊತ್ತವನ್ನು ಮುಕ್ತ ಕೌನ್ಸಿಲಿಂಗ್ ಸಮಯದಲ್ಲಿ ಪಾವತಿಸಬೇಕು; ವಾರ್ಷಿಕ ಆದಾಯ ರೂ.10.00 ಲಕ್ಷಕ್ಕಿಂತ ಹೆಚ್ಚಿದ್ದಲ್ಲಿ ಸಾಮಾನ್ಯ ಅಭ್ಯರ್ಥಿಗಳಂತೆ ನಿಗದಿಪಡಿಸಿದ ಪೂರ್ಣ ಶುಲ್ಕವನ್ನು (ಅಂದರೆ ರೂ.32,725) ಪಾವತಿಸಬೇಕಾಗುತ್ತದೆ.

14. ಈ ಮುಕ್ತ ಕೌನ್ಸಲಿಂಗ್ ಪ್ರಕ್ರಿಯೆಯಲ್ಲಿ ಪಾವತಿಸಿದ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸುವುದಿಲ್ಲ.

15. ಈ ಮುಕ್ತ ಕೌನ್ಸಿಲಿಂಗ್ ಮತ್ತು ಪ್ರವೇಶಾತಿ ಪ್ರಕ್ರಿಯೆಗೆ ಸಂಬಂದಪಟ್ಟ ವಿಷಯಗಳಲ್ಲಿ ರಾಜ್ಯದ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳ ಒಮ್ಮತ ತೀರ್ಮಾನವೇ ಅಂತಿಮವಾಗಿರುತ್ತದೆ.

ಆಯ್ಕೆಯಾದ ಅಭ್ಯರ್ಥಿಗಳು ಆಯಾ ವಿಶ್ವವಿದ್ಯಾಲಯ/ ಕಾಲೇಜುಗಳಿಗೆ ದಿನಾಂಕ: 16-01-2024 ರ ಸಾಯಂಕಾಲ 4.00 ಘಂಟೆಯೊಳಗೆ ಕಡ್ಡಾಯವಾಗಿ ಹಾಜರಾಗತಕ್ಕದ್ದು.

3/1/24

ಕುಲಸಚಿವರು
ಕೃವಿವಿ, ಧಾರವಾಡ (ರಾಜ್ಯದ ಎಲ್ಲ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯಗಳ ಪರವಾಗಿ)

**ಕುಲಸಚಿವರು**
**ಕೃಷಿ ವಿಶ್ವವಿದ್ಯಾಲಯ, ಧಾರವಾಡ**

ಪ್ರತಿಗಳು ಸೂಕ್ತ ಕ್ರಮಕ್ಕಾಗಿ:
1. ಶಿಕ್ಷಣ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ಧಾರವಾಡ.
2. ಕುಲಸಚಿವರು / ಶಿಕ್ಷಣ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು.
3. ಕುಲಸಚಿವರು / ಶಿಕ್ಷಣ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ರಾಯಚೂರು.
4. ಕುಲಸಚಿವರು / ಶಿಕ್ಷಣ ನಿರ್ದೇಶಕರು, ತೋಟಗಾರಿಕೆ ವಿಶ್ವವಿದ್ಯಾಲಯ, ಬಾಗಲಕೋಟ.

ಪ್ರತಿಗಳನ್ನು ಮಾಹಿತಿಗಾಗಿ ಸಲ್ಲಿಸಲಾಗಿದೆ.
1. ಮಾನ್ಯ ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ.
2. ಮಾನ್ಯ ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು.
3. ಮಾನ್ಯ ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ರಾಯಚೂರು.
4. ಮಾನ್ಯ ಕುಲಪತಿಗಳು, ತೋಟಗಾರಿಕೆ ವಿಶ್ವವಿದ್ಯಾಲಯ, ಬಾಗಲಕೋಟ.